

ಕೋಳಿಯನ್ನು ತರೋಣ ಎಂದು ಕೇಳಿತು. ಆದರೆ ಅಲ್ಲಿ ಕೋಳಿಯೇ ಇಲ್ಲ! ನೆಲದ ಮೇಲೆಲ್ಲಾ ಪುಕ್ಕಗಳು ಮತ್ತು ಮೂಳೆಯ ಚೂರುಗಳೇ ಇದ್ದವು. ಅದನ್ನು ಕಂಡ ನರಿ ನನ್ನ ಬೂದು ಬಣ್ಣದ ಕೋಳಿ, ನನ್ನ ಬೂದು ಬಣ್ಣದ ಕೋಳಿ, ಅಯ್ಯೋ ನಿನ್ನ ಮೇಕೆ ನನ್ನ ಕೋಳಿಯನ್ನು ರಾತ್ರಿ ತಿಂದು ಹಾಕಿದೆ. ನನಗದು ಬೇಕು ಎಂದು ಜೋರಾಗಿ ಅಳತೊಡಗಿತು. ಮನೆಯಾಕೆಗೆ ತುಂಬಾ ಬೇಸರವಾಯಿತು. ಹೋಗಲಿ ಬಿಡು. ಅದರ ಬದಲಿಗೆ ಇದನ್ನು ಕೊಡುತೀನಿ ಎಂದು ಒಂದು ಮೇಕೆ ಮರಿಯನ್ನು ಕೊಟ್ಟಳು. ನರಿ ಮೇಕೆ ಮರಿಯನ್ನು ಎತ್ತಿಕೊಂಡು ಓಡಿಹೋಯಿತು.

ಓಡಿ ಓಡಿ ಅದು ಇನ್ನೊಂದೂರಿಗೆ ಬಂದಿತು. ಆಗ ಸಂಜೆಯಾಗಿತ್ತು. ಅಲ್ಲಿ ಸಿಕ್ಕ ಮೊದಲ ಮನೆಗೆ ಹೋಗಿ ನರಿ ಬಾಗಿಲು ಬಡಿಯಿತು. ಒಳಗಿದ್ದ ಮನೆಯ ಗಂಡಸು ಬಾಗಿಲು ತೆರೆದ. ಒಡನೆ ನರಿ ಅಯ್ಯಾ ಈ ರಾತ್ರಿ ನಾನು ನಿಮ್ಮ ಮನೆಯಲ್ಲಿರಲೇ? ನಡೆದೂ ನಡೆದೂ ನನಗೆ ತುಂಬಾ ಆಯಾಸವಾಗಿದೆ ಎಂದಿತು. ಬಾ ಬಾ ಎಂದು ಅವನು ನರಿಯನ್ನು ಒಳಗೆ ಕರೆದುಕೊಂಡ. ಒಳಗೆ ಬಂದು ಈ ಮಗುವನ್ನು ಎಲ್ಲಿಡಲಿ ಎಂದಿತು. ಮನೆಯಾತ ಅದನ್ನು ನನ್ನ ಮಗನ ಹಾಸಿಗೆಯ ಹತ್ತಿರ ಬಿಡು ಎಂದ. ರಾತ್ರಿ ಎಲ್ಲರೂ ನಿದ್ರಿಸುತ್ತಿರುವಾಗ ನರಿ ಎದ್ದು ಆ ಮೇಕೆ ಮರಿಯನ್ನು ತಿಂದು ಹಾಕಿ ಮೂಳೆಗಳನ್ನು ಮಗನ ಹಾಸಿಗೆಯ ಮೇಲೆ ಹಾಕಿತು. ಗುಮಾನಿ ಬರದಂತೆ ಮಲಗಿಕೊಂಡಿತು. ಬೆಳಗ್ಗೆ ಎದ್ದು ಮನೆಯಾತನನ್ನು ತನ್ನ ಮರಿ ಎಲ್ಲೆಂದು ಕೇಳಿತು. ಮನೆಯಾತ ನೋಡಿದರೆ ಬರೀ ಮೂಳೆಗಳಿವೆ! ಅಯ್ಯೋ ಅಯ್ಯೋ ನಿನ್ನ ಮಗ ನನ್ನ ಮರಿಯನ್ನು ತಿಂದುಬಿಟ್ಟಿದ್ದಾನೆ. ಅಯ್ಯೋ ಅಯ್ಯೋ ಎಂದು ಜೋರಾಗಿ ನರಿ ಅಳತೊಡಗಿತು. ಮನೆಯಾತ ಅದಕ್ಕೆ ಸಮಾಧಾನ ಮಾಡುತ್ತಾ ಸುಮ್ಮನಿರು, ನಾನು ನಿನಗೆ ದೊಡ್ಡ ಮೇಕೆಯನ್ನೇ ಕೊಡುವೆ ಎಂದ. ನರಿ ಮೇಕೆ ಬೇಡವೆಂದಿತು. ನನಗೆ ನಿನ್ನ ಮಗನನ್ನೇ ಕೊಡು ಎಂದು ಕೇಳಿತು.

ಮನೆಯಾತ ಆಯಿತು. ನಿನ್ನಿಷ್ಟದ ಹಾಗೆಯೇ ಆಗಲಿ. ಸ್ವಲ್ಪ ಹೊತ್ತು ಸುಮ್ಮನೆ ಬಾಗಿಲ ಬಳಿ ನಿಂತಿರು ಎಂದ. ಬಳಿಕ ದೊಡ್ಡದೊಂದು ಮೂತಿ ಕಟ್ಟಿದ ಚೀಲವನ್ನು ತಂದು ನರಿಗೆ ಕೊಟ್ಟು ತಗೋ, ಈ ಚೀಲದಲ್ಲಿ ನನ್ನ ಮಗನಿದ್ದಾನೆ. ಇಲ್ಲಿ ಚೀಲ ಬಿಚ್ಚಬೇಡ. ಮೈಲು ದೂರ ಹೋದ ಮೇಲೆ ಬಿಚ್ಚು ಎಂದು ಹೇಳಿದ. ನರಿಗೆ ಸಂತೋಷವಾಯಿತು. ಅದು ಚೀಲವನ್ನು ಎತ್ತಿಕೊಂಡು ಓಡಿಹೋಯಿತು. ಸ್ವಲ್ಪ ದೂರ ಹೋದ ಮೇಲೆ ಅದಕ್ಕೆ ಚೀಲ ತುಂಬಾ ಭಾರವೆನ್ನಿಸಿತು. ಯಜಮಾನ ಮಗನ ಬದಲು ಕಲ್ಲು ಗುಂಡುಗಳನ್ನೇದರೂ ಇಟ್ಟು ಕೊಟ್ಟನೇ ಎಂಬ ಗುಮಾನಿ ಅದಕ್ಕೆ ಬಂದಿತು. ಚೀಲವನ್ನು ನೆಲದ ಮೇಲಿಟ್ಟು ಮೂತಿ ಬಿಚ್ಚಿತು. ಚೀಲ ಬಿಚ್ಚಿದೊಡನೆಯೇ ಚೀಲದಲ್ಲಿದ್ದ ಎರಡು ದೊಡ್ಡ ದೊಡ್ಡ ನಾಯಿಗಳು ಒಮ್ಮೆಲೇ ನರಿಯ ಮೇಲೆ ಬಿದ್ದು ಅದನ್ನು ಹರಿದು ಕೊಂದುಹಾಕಿದವು.

**(ಆಫ್ರಿಕದ ಕತೆಯೊಂದರಿಂದ)**